ಅರಿತುಕೊಳ್ಳುತ್ತೀರಿ. ನನ್ನ ಸೂಚನೆಯ ಮೇರೆಗೆ ಮೆನನ್ ಗೌರವನನ್ನು ಗೌಪ್ಯವಾಗಿ ಮಾತಾಡಿಸಿದ. ಸಿಕ್ಕಿರುವ ಆಫರಿನ ಆಧಾರದಲ್ಲಿ ಇಲ್ಲೇ ಮುಂದುವರೆಯಲು ಗೌರವ್ ಕೇಳುತ್ತಿರುವುದು ಸರಿಸುಮಾರು ನನ್ನಷ್ಟೇ ವೇತನ... ಇನ್ನು ಏನು ಮಾಡಬೇಕು ಎಂದು ನೀವೆಲ್ಲ ಸಮಾಲೋಚಿಸಿ ಹೇಳಿ' ಎನ್ನುತ್ತ ನಿಧಾನವಾಗಿ ಸಭೆಯ ಎಲ್ಲ ಡೈರೆಕ್ಟರರ ಮುಖ ನೋಡಿದರು.

'ಈಗ ಇದಕ್ಕೆ ನೀವೇನು ಹೇಳುವುದು?' ಡೈರೆಕ್ಟರೊಬ್ಬರು ಸಮಸ್ಯೆಗೆ ಪರಿಹಾರ ಹುಡುಕುವ ಭಾರವನ್ನೆಲ್ಲ ಶರ್ಮರ ಮೇಲೆಯೇ ಹೊರಿಸಿ ಕೇಳಿದರು.

'ಗೌರವ್ ಬಿಟ್ಟುಹೋದರೆ ಕಂಪೆನಿಯಲ್ಲಿ ಸ್ವಲ್ಪ ಏರುಪೇರಾಗಿ ಕನಿಷ್ಠ ಎರಡು ವರ್ಷ ಸಮಸ್ಯೆಗಳು ಎದುರಾಗಬಹುದು' ಎಂದರು ಶರ್ಮಾ. ಎರಡು ವರ್ಷಗಳಲ್ಲಿ ತಾನು ರಿಟೈರ್ ಆಗುತ್ತೇನಲ್ಲ, ಅಲ್ಲಿಯವರೆಗೆ ಬರಬಹುದಾದ ಎಲ್ಲ ಸಮಸ್ಯೆಗಳಿಗೆ ಇದೊಂದು ನಿರೀಕ್ಷಣಾ ಜಾಮೀನಾಗಿರಲಿ ಎಂದುಕೊಂಡಂತಿತ್ತು ಅವರ ಮಾತು!

'ಮತ್ತೊಂದು ಸಮಸ್ಯೆಯೂ ಇದೆ. ಇದುವರೆಗೂ ಸೀನಿಯರ್ ಲೆವೆಲಿನ ಇಬ್ಬರಿದ್ದರು. ಇನ್ನು ಮೆನನ್ ಒಬ್ಬನೇ ಉಳಿದುಕೊಳ್ಳುತ್ತಾನೆ. ಆತನಿಗೂ ಈಗ ಹೊರಗೆ ತನ್ನ ಬೆಲೆ ಎಷ್ಟಿದೆ ಎಂಬ ಸೂಚನೆ ದೊರಕಿದೆ. ಎಲ್ಲಾದರೂ ಆತನೂ ಬಿಟ್ಟು ಹೋಗುತ್ತೇನೆ ಎಂದರೆ ಕಂಪೆನಿ ವ್ಯವಹಾರಕ್ಕೆ ಊಹಿಸಲಾಗದ ಪೆಟ್ಟು ಬೀಳುವ ಸಂಭವ ಉಂಟಾಗಿದೆ. ನಮ್ಮ ಕಂಪೆನಿಗೆ ನೌಕರರನ್ನು ಉಳಿಸಿಕೊಳ್ಳುವ ಇರಾದೆಯೇ ಇಲ್ಲ ಎಂಬುದು ಗೊತ್ತಾದರೆ ಮೆನನ್ ಕೂಡ

